# ದುಬಾರಿ ಡೈವೋರ್ಸಿಗ ಡಿಮಿಟ್ರಿ

ಡಿಮಿಟ್ರಿ ರೈಬೊಲೊವ್ಲೆವ್ ಎನ್ನುವ ಹೆಸರನ್ನು ಉಚ್ಚರಿಸುವುದು ಸ್ವಲ್ಪ ಕಷ್ಟವೇ. ಆದರೆ ಕಳೆದ ವಾರವಿಡೀ ಪತ್ರಿಕೆಗಳಲ್ಲಿ ಈತನದ್ದೇ ಸುದ್ದಿ. 48ರ ಹರೆಯದ ಡಿಮಿಟ್ರಿಯ ಹೆಸರನ್ನು ಉಚ್ಚರಿಸಲು ಕಷ್ಟವಾದವರೂ, ಆತನ ಡೈವೋರ್ಸ್ ಕುರಿತ ಸುದ್ದಿಯನ್ನು ಓದಲು jn ಮರೆಯಲಿಲ್ಲ. ಏಕೆಂದರೆ ಆತನದ್ದು ಜಗತ್ತಿನಲ್ಲೇ ಅತ್ಯಂತ ದುಬಾರಿ ಡೈವೋರ್ಸ್! 23 ವರ್ಷಗಳ ಕಾಲ ಒಟ್ಟಿಗೆ ಬಾಳಿದ ಡಿಮಿಟ್ರಿ ಮತ್ತು ಪತ್ನಿ ಎಲೆನಾ, ಕಳೆದ ಏಳು ವರ್ಷಗಳಿಂದ ಕೋರ್ಟ್‌ನಲ್ಲಿ ಡೈವೋರ್ಸ್ ಕೇಸ್ ಸಲುವಾಗಿ ಜಿದ್ದಾಜಿದ್ದಿ ಹೋರಾಟ ನಡೆಸಿದ್ದರು. ಕಳೆದ ವಾರ ಇಬ್ಬರೂ 'ಕೋರ್ಟ್ ಹೊರಗಿನ ಒಪ್ಪಂದ'ಕ್ಕೆ ಬಂದು ಕೇಸನ್ನು ಮರಳಿ ಪಡೆಯಲು ನಿರ್ಧರಿಸಿದ್ದಾರೆ. ಈ ಹೊರಗಿನ ಸೆಟ್ಲ್‌ಮೆಂಟ್‌ನಲ್ಲಿ ಕೊನೆಗೂ ವಿಚ್ಛೇದಿತ ಪತ್ನಿಗೆ ಡಿಮಿಟ್ರಿ ಕೊಡಲು ಒಪ್ಪಿದ ಹಣ ಎಷ್ಟೆಂಬುದು ಬಹಿರಂಗವಾಗಿಲ್ಲ. ಆದರೆ 2014ರಲ್ಲಿ ಸ್ವಿಸ್ ಕೋರ್ಟ್ ಆದೇಶಿಸಿದ 4.5 ಶತಕೋಟಿ ಡಾಲರ್‌ಗಿಂತ ಅದು ಹೆಚ್ಚಾಗಿದೆ ಎನ್ನುವುದು ಬಲ್ಲಮೂಲಗಳ ವಿವರಣೆ. ಜಗತ್ತಿನಲ್ಲಿ ಈವರೆಗೆ ಯಾರೂ ವಿಚ್ಛೇದಿತ ಪತ್ನಿಗೆ ಇಷ್ಟೊಂದು ದೊಡ್ಡ ಮೊತ್ತದ ಪರಿಹಾರ ಕೊಟ್ಟ ಇನ್ನೊಂದು ಉದಾಹರಣೆ ಇಲ್ಲ.

ಈ ಡೈವೋರ್ಸ್ ಕಳೆದ ಏಳು ವರ್ಷಗಳಿಂದ ಸುದ್ದಿ ಮಾಡುತ್ತಲೇ ಇತ್ತು. ಡಿಮಿಟ್ರಿಯ ಘೋಷಿತ ಆಸ್ತಿ ಮೊತ್ತ 8.5 ಶತಕೋಟಿ ಡಾಲರ್. ಇದರಲ್ಲಿ ಅರ್ಧದಷ್ಟನ್ನು ವಿಚ್ಛೇದಿತ ಪತ್ನಿಗೆ ಪರಿಹಾರವಾಗಿ ನೀಡಬೇಕು ಎನ್ನುವುದು ಕೋರ್ಟ್ ಆದೇಶ. ಆದರೆ ಪತ್ನಿ ಎಲೆನಾ ಪರ ವಕೀಲರ ವಾದವೇ ಬೇರೆ. 'ಡಿಮಿಟ್ರಿ 2005ರಲ್ಲಿ ತನ್ನ ಒಡೆತನದ ರಸಗೊಬ್ಬರ ಕಂಪೆನಿಯ ಭಾರೀ ಪ್ರಮಾಣದ ಷೇರುಗಳನ್ನು ಟ್ರಸ್ಟ್ ಒಂದಕ್ಕೆ ವರ್ಗಾಯಿಸಿದ್ದಾನೆ. 2010ರಲ್ಲಿ ಆ ಷೇರುಗಳ ಮಾರಾಟದಿಂದ 6.5 ಶತಕೋಟಿ ಡಾಲರ್ ಹಣ ಬಂದಿದೆ. ಈ ಟ್ರಸ್ಟ್‌ನ ಹೆಸರಲ್ಲಿ ನ್ಯೂಯಾರ್ಕ್ ಮತ್ತಿತರ ಕಡೆ ಇರುವ ಭಾರೀ ಕಟ್ಟಡಸಮುಚ್ಛಯಗಳ ವಿವರಗಳನ್ನೂ ಆಸ್ತಿಯಲ್ಲಿ ನಮೂದಿಸಿಲ್ಲ. ಅದೆಲ್ಲದರ ಒಟ್ಟು ಮೊತ್ತ ಲೆಕ್ಕ ಹಾಕಿ ಅದರ ಅರ್ಧದಷ್ಟು ಕೊಡಿಸಿ' ಎನ್ನುವುದು ಎಲೆನಾ ವಕೀಲರ ವಾದ. ಕಳೆದ ಏಳು ವರ್ಷಗಳಿಂದ ಈ ಕುರಿತ ವಾದವಿವಾದ ನಡೆದೇ ಇತ್ತು.



ಡಿಮಿಟ್ರಿ ಮತ್ತು ಎಲೆನಾ ಪರಿಚಯವಾದದ್ದು 30 ವರ್ಷಗಳ ಹಿಂದೆ ಕಾಲೇಜ್ ಕ್ಯಾಂಪಸ್‌ನಲ್ಲಿ. ಏಳು ವರ್ಷಗಳ ಒಡನಾಟದ ಬಳಿಕ ಇಬ್ಬರೂ ಮದುವೆಯಾಗಲು ಒಪ್ಪಿಕೊಂಡರು. 23 ವರ್ಷಗಳ ದಾಂಪತ್ಯ ಬಿರುಕು ಬಿಡಲು ಕಾರಣಗಳೇನು ಎನ್ನುವುದು ಸ್ಪಷ್ಟವಾಗಿ ಯಾರಿಗೂ ಗೊತ್ತಿಲ್ಲ. ಒಂದು ಮೂಲದ ಪ್ರಕಾರ, 'ಗಂಡ ವಿಶ್ವದಾದ್ಯಂತ ಇರುವ ಆಸ್ತಿಗಳ ವಿವರಗಳನ್ನು ತನಗೆ ತಿಳಿಸಿಲ್ಲ. ಅಲ್ಲೆಲ್ಲ ಯಾರ ಜತೆಗೂ ಓಡಾಡುತ್ತಾನೆ' ಎನ್ನುವ ಪತ್ನಿಯ ವಾದವೇ ಕಾರಣವಂತೆ. ಕೋರ್ಟ್ ಜಗಳ ಎಷ್ಟು ಕೆಟ್ಟದಾಗಿ ನಡೆಯಿತೆಂದರೆ, ಒಂದು ಹಂತದಲ್ಲಿ 28 ದಶಲಕ್ಷ ಡಾಲರ್ ಮೌಲ್ಯದ ತನ್ನ ಉಂಗುರವನ್ನು ಪತ್ನಿ ಕದ್ದಿದ್ದಾಳೆ ಎಂದು ಹೊಸ ಕೇಸ್ ಹಾಕಿದ ಗಂಡ ಆಕೆಯನ್ನು ಜೈಲಿಗಟ್ಟಲು ಯತ್ನಿಸಿದ್ದ.

ಡಿಮಿಟ್ರಿಯ ಅಪ್ಪ ಸೈಂಟಿಸ್ಟ್. 1990ರಲ್ಲಿ ವೈದ್ಯಕೀಯ ಕಲಿತು ಡಾಕ್ಟರ್ ಆದ ಡಿಮಿಟ್ರಿ, ಪ್ರಾಕ್ಟೀಸ್ ಮಾಡುವ ಬದಲು ಅಪ್ಪನ ಜತೆ ಸೇರಿ ಕಂಪೆನಿಯೊಂದನ್ನು ಸ್ಥಾಪಿಸಿ ಷೇರು ವಹಿವಾಟು ಶುರು ಮಾಡಿದ. ರಷ್ಯಾದ ಅತಿದೊಡ್ಡ ರಸಗೊಬ್ಬರ ಕಾರ್ಖಾನೆ ಉರಾಲ್ಕಲಿ ಯ ಷೇರುಗಳನ್ನು ಖರೀದಿಸಿದ. ಮೂರೇ ವರ್ಷಗಳಲ್ಲಿ ಅತ್ಯಧಿಕ ಷೇರುಗಳನ್ನು ಸಂಗ್ರಹಿಸಿ ಕಂಪೆನಿಯ ಚೇರ್‌ಮನ್ ಆದ. ಐದು ವರ್ಷಗಳ ಬಳಿಕ ಆ ಕಂಪೆನಿಯ ಷೇರುಗಳ ಮಾರಾಟದಿಂದ 6.5 ಶತಕೋಟಿ ಡಾಲರ್ ಗಳಿಸಿದ. ಗ್ರೀಸ್‌ನ ಎರಡು ದ್ವೀಪಗಳ ಸಹಿತ ವಿಶ್ವಾದ್ಯಂತ ಆಸ್ತಿ ಖರೀದಿಸಿದ. ಫ್ರೆಂಚ್ ಫುಟ್‌ಬಾಲ್ ಕ್ಲಬ್ ಎಎಸ್ ಮೊನಾಕೊ ವನ್ನೂ ಖರೀದಿಸಿದ. ಈಗ ಈತ ವಿಶ್ವದ 165ನೇ ಅತಿದೊಡ್ಡ ಶ್ರೀಮಂತ. ರಷ್ಯಾದ 14ನೇ ಅತಿದೊಡ್ಡ ಹಣವಂತ.

ಹಾಗೆಂದು ಈತನ ಪಯಣವೇನೂ ಸುಖಕರವಾಗಿರಲಿಲ್ಲ. ಒಂದು ಹಂತದಲ್ಲಿ ರಷ್ಯಾ ಸರ್ಕಾರವೇ ಈತನ ಬೆನ್ನು ಹತ್ತಿತ್ತು. ಪ್ರತಿಸ್ಪರ್ಧಿ ಬ್ಯಾಂಕರ್ ಎಡ್ಮಂಡ್ ಸಪ್ರಾನ ಹೆಣ ಈತನ ಭಾರೀ ಬಂಗಲೆಯ ಬಾತ್‌ರೂಂನಲ್ಲಿ ಸಿಕ್ಕು, ಕೊಲೆ ಕೇಸ್ ದಾಖಲಾಯಿತು. 11 ತಿಂಗಳು ಜೈಲುವಾಸದ ಬಳಿಕ ಕೇಸ್ ಗೆದ್ದು ಹೊರಬಂದ. ಕೆಲವರು ಕೊಲೆ ಬೆದರಿಕೆ ಹಾಕಿದ ಹಿನ್ನೆಲೆಯಲ್ಲಿ ವಾಸ್ತವ್ಯವನ್ನು ಮೊನಾಕೋದಿಂದ ಜಿನೇವಾಗೆ ಬದಲಾಯಿಸಿದ. ಸದಾ ಬುಲೆಟ್‌ಪ್ರೂಫ್ ಜಾಕೆಟ್ ಧರಿಸಿಕೊಂಡು ಓಡಾಡಬೇಕಾಯಿತು. ತೀರಾ ಇತ್ತೀಚೆಗೆ, ಕಲಾವ್ಯಾಪಾರಿಯೊಬ್ಬ ತನಗೆ ಆರ್ಟ್‌ವರ್ಕ್‌ಗಳ ಮಾರಾಟದಲ್ಲಿ ಭಾರೀ ಮೋಸ ಮಾಡಿದ್ದಾನೆಂದು ಆರೋಪಿಸಿ ಕೋರ್ಟ್ ಮೆಟ್ಟಿಲು ಹತ್ತಿದ್ದಾನೆ. ಈ ಮಧ್ಯೆ ಈಗ ಹೆಂಡತಿಯೂ ಕೈಬಿಟ್ಟಿದ್ದಾಳೆ. 'ಹೆಂಡತಿಗೆ ಡೈವೋರ್ಸ್ ಕೊಡಲು ನನಗೆ ಮನಸ್ಸಿಲ್ಲ. ಆದರೆ ಆಕೆ ನನ್ನನ್ನು ನಂಬುತ್ತಿಲ್ಲ' ಎನ್ನುವ ಡಿಮಿಟ್ರಿ, ಇತ್ತೀಚೆಗೆ ಫುಟ್‌ಬಾಲ್ ಪಂದ್ಯಗಳ ಗ್ಯಾಲರಿಯಲ್ಲಿ ಅಪರಿಚಿತ ಹೆಣ್ಣೊಬ್ಬಳ ಜತೆಗೆ ಕಾಣಿಸಿಕೊಂಡು ಸುದ್ದಿಯಾಗಿದ್ದ. ಪತ್ರಕರ್ತರೀಗ ಆಕೆಯ ಬಯೊಡಾಟಾ ಸಲುವಾಗಿ ಬೆನ್ನು ಹತ್ತಿದ್ದಾರೆ!

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65